(ಇಂದು ದಿನಾಂಕ 14-02-2020 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆ - ವಾದಿ ಪರ ಶ್ರೀ ಎನ್.ಕೆ.ಎಸ್. ವಕೀಲರಿಂದ-**

ನಾನು ಈ ಪ್ರಕರಣದಲ್ಲಿ 1 ನೇ ವಾದಿ ಇದ್ದು, ನನ್ನ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

ನಾನು ಈಗಾಗಲೇ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದ್ರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಯನ್ನಾಗಿ ಗುರುತಿಸಲಾಗಿದೆ.

ನಿಶಾನೆ ಪಿ. 1 - ಸ.ನಂ. 82/3 ಬರ್ಗಿ ಗ್ರಾಮದ ಪಹಣಿಪತ್ರಿಕೆ

ನಿಶಾನೆ ಪಿ. 2 - ಸ.ನಂ. 86/6 ಬರ್ಗಿ ಗ್ರಾಮದ ಪಹಣಿಪತ್ರಿಕೆ

ನಿಶಾನೆ ಪಿ. 3 - ಸ.ನಂ. 82/4 ಬರ್ಗಿ ಗ್ರಾಮದ ಪಹಣಿಪತ್ರಿಕೆ

ನಿಶಾನೆ ಪಿ. 4 - ದಾವಾಸ್ತಿ ಸ.ನಂ. 82/1 ಅ 1, 3 ಹಾಗೂ 86/6 ಇವುಗಳ ಸರ್ವೆ ನಕಾಶೆ

ನಿಶಾನೆ ಪಿ. 5 - ದಾವಾಸ್ತಿ ಸ.ನಂ. 82/1 ಬಿ, 2 ರಿಂದ 7 ಇವುಗಳ ಸರ್ವೆ ನಕಾಶೆ

ನಿಶಾನೆ ಪಿ. 6 - ಸರ್ವೆ ನೋಟಿಸು

ನಿಶಾನೆ ಪಿ. 7 - ನಾನು ತಹಶೀಲ್ದಾರ ಇವರಿಗೆ ಬರೆದ ಉತ್ತರ ಪತ್ರ ದಿನಾಂಕ 09-05-2017 ರ ನಕಲು ಪ್ರತಿ

ನಿಶಾನೆ ಪಿ. 8 ರಿಂದ 13 - ದಾವಾಸ್ತಿಗಳಿಗೆ ಸಂಬಂಧಿಸಿದ ಫೋಟೊಗಳು
(ರುಜುವಾತಿನ ಷರತ್ತಿಗೆ ಒಳಪಟ್ಟು ಗುರುತಿಸಲಾಯಿತು.)

ನಿಶಾನೆ ಪಿ. 14 - ಸದ್ರಿ ಫೋಟೊಗಳಿಗೆ ಸಂಬಂಧಿಸಿದೆ ಎನ್ನಲಾದ ಸಿ.ಡಿ.

ನಿ.ಪಿ. 9, 10 ರಲ್ಲಿ ದಾವಾ ಪಾಗಾರ ಕಾಣಿಸುತ್ತದೆ. ನಿ.ಪಿ. 12 ರಲ್ಲಿ ಕಾಣಿಸುವ ರಸ್ತೆಂಟ ಎಡಭಾಗದಲ್ಲಿ ನನ್ನ ಆಸ್ತಿ ಇರುತ್ತದೆ . ನಿ.ಪಿ. 13 ರಲ್ಲಿ ಕಾಣಿಸುವ ಮನೆ ನನ್ನ ಅಣ್ಣನಾದ ಮೃತ ವಿನಾಯಕ ಹೊಸಮನೆ ಈತನಿಗೆ ಸೇರಿದ್ದು ಇರುತ್ತದೆ.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ